# Mobile Command Centre for Hubballi

**Prajavani | 06 January 2018**

### ಜನರ ಚಲನವಲನಗಳ ಮೇಲೆ ನಿಗಾ ಇಡಲು 19 ಕ್ಯಾಮೆರಾ

# ಹುಬ್ಬಳ್ಳಿಗೂ 'ಕಮಾಂಡ್ ಸೆಂಟರ್'

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ದೊಡ್ಡ ಸಮಾರಂಭಗಳು ನಡೆದಾಗ ಜನರ ಚಲನವಲನಗಳ ಮೇಲೆ ನಿಗಾ ಇಡಲು ಅನುಕೂಲವಾಗುವ 'ಮೊಬೈಲ್ ಕಮಾಂಡ್ ಸೆಂಟರ್' ಬಸ್‌ಗೆ ಗೃಹಸಚಿವ ರಾಮಲಿಂಗ ರೆಡ್ಡಿ ಶುಕ್ರವಾರ ಚಾಲನೆ ನೀಡಿದರು.

ಇದರಲ್ಲಿ ಒಟ್ಟು 19 ಕ್ಯಾಮೆರಾಗಳು ಇರುತ್ತವೆ. ಬಸ್ಸಿನ ಸುತ್ತಲು ನಾಲ್ಕು ಕ್ಯಾಮೆರಾ, ನಾಲ್ಕು ಜಾಕೆಟ್ ಕ್ಯಾಮೆರಾ, ಒಂದು ಡ್ರೋಣ್ ಕ್ಯಾಮೆರಾ ಇರಲಿದ್ದು, ಜನಜಂಗುಳಿ ಇರುವ ಪ್ರದೇಶಗಳಲ್ಲಿ ಪೊಲೀಸ್ ಕಣ್ಗಾವಲು ಸುಲಭವಾಗುತ್ತದೆ. ಬೆಂಗಳೂರು ಮತ್ತು ಮೈಸೂರಿನಲ್ಲಿ ಕಮಾಂಡ್ ಸೆಂಟರ್ ಇದ್ದು, ಈ ಸೌಲಭ್ಯ ಹೊಂದಿದ ರಾಜ್ಯದ ಮೂರನೇ ನಗರ ಎನ್ನುವ ಹೆಗ್ಗಳಿಕೆಗೆ ಹುಬ್ಬಳ್ಳಿ ಪಾತ್ರವಾಯಿತು.

'₹ 2.16 ಕೋಟಿ ವೆಚ್ಚದಲ್ಲಿ ಮೊಬೈಲ್ ಕಮಾಂಡ್ ಸೌಲಭ್ಯ ಆರಂಭಿಸಲಾಗಿದೆ. ಇದರಿಂದ ಪೊಲೀಸರ ಕೆಲಸ ಸುಲಭವಾಗುತ್ತದೆ. ಈ ರೀತಿಯ ಸೌಲಭ್ಯ ಇದ್ದರೆ ಸಾವಿರ ಕಣ್ಣುಗಳು ಇದ್ದ ಹಾಗೆ' ಎಂದು ರಾಮಲಿಂಗ ರೆಡ್ಡಿ ಹೇಳಿದರು.



ಮೊಬೈಲ್ ಕಮಾಂಡ್ ಸೆಂಟರ್ ಉದ್ಘಾಟಿಸಿದ ಬಳಿಕ ಸಚಿವ ರಾಮಲಿಂಗರೆಡ್ಡಿ ಬಸ್ ಒಳಗಿನ ಸೌಲಭ್ಯಗಳ ಬಗ್ಗೆ ಮಾಹಿತಿ ಪಡೆದರು

'ಸುಮಾರು 50ರಿಂದ 60 ಜನ ಪೊಲೀಸರು ಮಾಡುವ ಕೆಲಸವನ್ನು ಈ ಕ್ಯಾಮೆರಾಗಳು ಮಾಡುತ್ತವೆ. ದೊಡ್ಡ ಸಮಾರಂಭಗಳಲ್ಲಿ ಎಲ್ಲರ ಮೇಲೆ ಕಣ್ಣಿಡಲು ಇದರಿಂದ ಸಾಧ್ಯ' ಎಂದು ಸೆಂಟರ್‌ನ ಕಾರ್ಯನಿರ್ವಹಣೆಯ ಬಗ್ಗೆ ತರಬೇತಿ ಪಡೆದುಬಂದಿರುವ ಪೊಲೀಸ್ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

'ಕಾರ್ಯಕ್ರಮ ನಡೆಯುವ ಸ್ಥಳಕ್ಕೆ ಒಂದು ಗಂಟೆ ಮೊದಲು ಹೋಗಿ ಈ ಬಸ್ ನಿಲ್ಲಿಸಿದರೆ ಸಾಕು, ಸುತ್ತಲಿನ ಒಂದು ಕಿ.ಮೀ. ವರೆಗಿನ ದೂರದ ಆಗುಹೋಗುಗಳನ್ನು ಕುಳಿತಲ್ಲಿಯೇ ಚಿತ್ರೀಕರಿಸಬಹುದು' ಎಂದು ರಾಜ್ಯ ಸರ್ಕಾರಕ್ಕೆ ಬಸ್ ನೀಡಿರುವ ಮಿಸ್ತ್ರಾಲ್ ಕಂಪೆನಿಯ ವಿತರಣಾ ವ್ಯವಸ್ಥಾಪಕ ಅಮನುಲ್ಲಾ ಖಾನ್ ತಿಳಿಸಿದರು.

ಹುಬ್ಬಳ್ಳಿ-ಧಾರವಾಡ ಮಹಾನಗರ ಪೊಲೀಸ್ ಕಮಿಷನರ್ ಎಂ.ಎನ್. ನಾಗರಾಜ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಜಿ. ಸಂಗೀತಾ, ಜಿಲ್ಲಾಧಿಕಾರಿ ಎಸ್.ಬಿ. ಬೊಮ್ಮನಹಳ್ಳಿ, ಮೇಯರ್ ಡಿ.ಕೆ. ಚವ್ಹಾಣ, ಡಿಸಿಪಿಗಳಾದ ರೇಣುಕಾ ಸುಕುಮಾರ, ಬಿ.ಎಸ್. ನೇಮಗೌಡ, ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಅಧ್ಯಕ್ಷ ಸದಾನಂದ ಡಂಗನವರ ಇದ್ದರು.

### 2 ಠಾಣೆಗೆ ಬೇಡಿಕೆ

'ಹುಬ್ಬಳ್ಳಿಗೆ ಎರಡು ಪೊಲೀಸ್ ಠಾಣೆ ಮಂಜೂರು ಮಾಡಬೇಕು ಎಂದು ಮನವಿ ಸಲ್ಲಿಸಲಾಗಿದೆ. ಈ ಕುರಿತು ಪರಿಶೀಲನೆ ಮಾಡಲಾಗುವುದು' ಎಂದು ರಾಮಲಿಂಗರೆಡ್ಡಿ ಹೇಳಿದರು.

'ರಾಜ್ಯದಲ್ಲಿ ಒಂದು ಲಕ್ಷ ಪೊಲೀಸರ ಕೊರತೆ ಇತ್ತು. ಇದನ್ನು ಅಲ್ಪಮಟ್ಟಿಗೆ ಕಡಿಮೆ ಮಾಡಿದ್ದೇವೆ. ಎಲ್ಲಾ ಸಿಬ್ಬಂದಿಗೆ ವಸತಿ ಸೌಲಭ್ಯ ನೀಡುವ ಕಾರ್ಯ ಪ್ರಗತಿಯಲ್ಲಿದೆ. ಇನ್ನೂ 4,500 ಮನೆಗಳ ನಿರ್ಮಾಣಕ್ಕೆ ಶೀಘ್ರದಲ್ಲಿಯೇ ಶಂಕುಸ್ಥಾಪನೆ ನೆರವೇರಿಸಲಾಗುವುದು' ಎಂದರು.